ಅನುಬಂಧ–1

63 (179) ಶ್ರೀ ಎನ್ ಬಾಲರಾಜ್ (ಕೊಳ್ಳೇಗಾಲ) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕೊಳ್ಳೇಗಾಲ ಕ್ಷೇತ್ರಗಳಲ್ಲಿ ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗಗಳ ಜನಸಂಖ್ಯೆ ಹೆಚ್ಚಾಗಿದ್ದು, ವಸತಿ ನಿಲಯಗಳಲ್ಲಿ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಮಂಜೂರಾಗಿರುವ ಸಂಖ್ಯೆ ಬಹಳ ಕಡಿಮೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ,

ಆ) ಹಾಗಿದ್ದಲ್ಲಿ ಮುಂದಿನ ಸಾಲಿನಲ್ಲಾದರೂ ಈ ಸಂಖ್ಯೆಯನ್ನು ಎರಡರಷ್ಟಕ್ಕಾದರೂ ಹೆಚ್ಚಿಸಲು ಮಂಜೂರಾತಿ ನೀಡಿ ಒತ್ತಡವನ್ನು ಕಡಿಮೆ ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೇ ?

ಶ್ರೀ ಬಾಲಚಂದ್ರ ಲ ಜಾರಕಿಹೊಳಿ (ಸಮಾಜ ಕಲ್ಯಾಣ ಸಚಿವರು)

ಅ) ಹೌದು

ಆ) 2006–07ನೇ ಸಾಲಿನಲ್ಲಿ ರಾಜ್ಯದಲ್ಲಿ ಪರಿಶಿಷ್ಟ ಜಾತಿಗೆ ಸಂಬಂಧಪಟ್ಟಂತೆ ಕೊಳ್ಳೇಗಾಲ ತಾಲ್ಲೂಕಿನ ಹನೂರು ಗ್ರಾಮದಲ್ಲಿ 50 ಸಂಖ್ಯಾಬಲದ ಮೆಟ್ರಿಕ್‌ಪೂರ್ವ ಬಾಲಕರ ವಿದ್ಯಾರ್ಥಿ ನಿಲಯವನ್ನು ಹೊಸದಾಗಿ ಪ್ರಾರಂಭಿಸುವ ವಿಷಯ ಮುಂದಿನ ವರ್ಷದ ಆಯವ್ಯಯದಲ್ಲಿ ಮಾಡುವ ಅವಕಾಶದ ಮೇಲೆ ಅವಲಂಬಿತವಾಗಿರುತ್ತದೆ

64 (180) Sri Balaraj S (Kollegal) Will the Minister of ?

a) How many veterinary Hospitals and Veterinary Dispensaries are there in Kollegal Assembly Constituency , (including Yelandur Taluk),

b) is there any proposal received to start new Veterinary Hospitals and Veterinary Institutions on necessity,

c) what are the actions taken up by the Government for upgradation of Veterinary Institutions,

d) is there any deficient of staff in there hospitals,

e) what are the programmes implemented during last year, (furnish detail information) ,

f) is there any new programmes to be implemented?

Sri (Minister)

a) There are15 Veterinary Institutions working in Kollegal including Yalandur They are,

Sl No	Institutions Name	No of Institution
1	Veterinary Hospitals	02
2	Veterinary Dispensires	02
3	Primary Veterinary Centers	03
4	K V C	08
	Total	**15**

b) In Yalandur and Kollegal taluk we have proposals have been received to start 10 Veterinary Institution in the following villages

1 Palya
2 Kurati
3 P G Palya
4 Maddur
5 Dhangere
6 Byllur
7 Gowdrahally
8 Gollara Dimbada
9 Hugyam
10 Ambale

c) The programmes of upgrading the Primary Veterinary Centers to Veterinary Dispensaries is on going programme in the Department of Animal Husbandry and Veterinary Services But there is no time limitation for this programme

At present proposal to upgrade 150 Primary Veterinary Centers, Artificial Insemination Centres to Veterinary Dispensaries and 50 Veterinary Dispensaries to Veterinary Hospitals is awaiting sanction from the Finance Department

d) Yes

11 posts are vacant in these institutions altogether Detail are given below

Sl No	Name of the post	Sanction	Filled	Vacant
1	Assistant Director	02	02	00
2	Veterinary Officer	06	02	04
3	Veterinary Livestock Supervisor	02	00	02
4	Senior Veterinary Inspector	10	08	02
5	Veterinary Inspector	09	07	02
6	Veterinary Assistant	08	08	00
7	Driver	01	00	01
8	D-Group	27	27	00
	Total	**65**	**54**	**11**

e Totally 22 programmes under State sector, 11 programmes under District sector are being implemented Scheme wise details furnished in the Annexure

f Yes

The following new programmes are being implemented in the Department of Animal Husbandry and Veterinary Services

1 Opening of New Veterinary College at Shimoga
2 Continued Research on Medical Values for Cow urine
3 Opening of institution in Rural Management and administration Institute as on the pattern of Anand
4 Opening of 69 New Veterinary Dispensaries in the Taluks where shortage of Veterinary Hospitals is noticed as per the Dr D M Nanjundappa Report For which Rs 800 crores has been allocated
5 Suvarna Karnataka Gothali Samrakshna Yojana to protect the local breeds of Cattle in Karnataka

ಅನುಬಂಧ

ಪ್ರಶ್ನೆ ಸಂಖ್ಯೆ 180 ಶ್ರೀ ಬಾಲರಾಜ್ ಎಸ್ (ಕೊಳ್ಳೇಗಾಲ)

ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆಯಲ್ಲಿ 2006–07ನೇ ಸಾಲಿನಲ್ಲಿ ಹಮ್ಮಿಕೊಂಡಿರುವ ಯೋಜನೆಗಳು ಹಾಗೂ ವೆಚ್ಚದ ವಿವರ

- 2006–07ನೇ ಸಾಲಿನಲ್ಲಿ ಯೋಜನೆಯಡಿ ರೂ 16400 38 ಲಕ್ಷಗಳನ್ನು ಒದಗಿಸಲಾಗಿದೆ ಡಿಸೆಂಬರ್ ಅಂತ್ಯಕ್ಕೆ ರೂ 6258 29 ಲಕ್ಷಗಳ ಗುರಿಗೆ ರೂ 4689 26 ಲಕ್ಷ ವೆಚ್ಚ ಆಗಿದ್ದು, ಈವರೆಗೆ ಬಿಡುಗಡೆಯಾದ ಅನುದಾನಕ್ಕೆ ರೂ 78 99 ಪ್ರಗತಿ ಆಗಿರುತ್ತದೆ
- **ರಾಜ್ಯದ ವಿವಿಧ ಪಶುವೈದ್ಯಕೀಯ ಸಂಸ್ಥೆಗಳಿಗೆ ಔಷಧಿ ಮತ್ತು ರಾಸಾಯನಿಕ ಪೂರೈಕೆಗಾಗಿ** ಆಯವ್ಯಯದಲ್ಲಿ ರೂ 10 00 ಕೋಟಿಯಿಂದ ರೂ 20 00 ಕೋಟಿಗೆ ಹೆಚ್ಚಿಸಲಾಗಿದ್ದು ಔಷಧಿ ಸರಬರಾಜು ಮಾಡಲು ಕ್ರಮವಹಿಸಿದೆ ಯೋಜನೆಯಡಿ ರೂ 512 33 ಲಕ್ಷ ಹಾಗೂ ಯೋಜನೇತರ ಅಡಿ ರೂ 624 00 ಲಕ್ಷಗಳ ವೆಚ್ಚದಲ್ಲಿ ವಿವಿಧ ಪಶುವೈದ್ಯ ಸಂಸ್ಥೆಗಳಿಗೆ ಔಷಧಿ ಸರಬರಾಜು ಮಾಡಲು ಕ್ರಮವಹಿಸಿದೆ
- **ಕರ್ನಾಟಕ ಪಶುವೈದ್ಯಕೀಯದವರು ಮತ್ತು ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾನಿಲಯ** ಸ್ಥಾಪನೆಗಾಗಿ ಮೂಲಭೂತ ಸೌಕರ್ಯ ಒದಗಿಸಲು ರೂ 1978 95 ಲಕ್ಷ ಅನುದಾನವನ್ನು ಒದಗಿಸಿದ್ದು, ರೂ 709 47 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ (ಶೇ 111 00%)
- **ಕುರಿ ಮತ್ತು ಉಣ್ಣೆ ಅಭಿವೃದ್ಧಿ ಯೋಜನೆಯಡಿ** ಕುರಿಗಳ ಆರೋಗ್ಯ ರಕ್ಷಣೆ, ಕುರಿ ಮತ್ತು ಆಡುಗಳ ತಳಿ ಅಭಿವೃದ್ಧಿ, ತರಬೇತಿ ಮತ್ತು ವಿಸ್ತರಣಾ ಕಾರ್ಯಕ್ರಮಕ್ಕಾಗಿ ರೂ 500 00 ಲಕ್ಷ ಅನುದಾನವನ್ನು

ನಿಗದಿಪಡಿಸಲಾಗಿದೆ ಡಿಸೆಂಬರ್ 2006 ರವರೆಗೆ ರೂ 75 00 ಲಕ್ಷ ವೆಚ್ಚವಾಗಿರುತ್ತದೆ ಹಾಗೂ ರೂ 125 00 ಲಕ್ಷ ಜನವರಿ ತಿಂಗಳಲ್ಲಿ ಬಿಡುಗಡೆಯಾಗಿದೆ

- **ಕರ್ನಾಟಕ ಜನಶ್ರೀ ವಿಮಾ ಯೋಜನೆ** ಜಾರಿಗೊಳಿಸಲಾಗುತ್ತಿದ್ದು ಕುರಿ ಸಾಕಾಣಿಕೆ ಅವಲಂಭಿಸಿರುವ 9 4 ಲಕ್ಷ ಕುರಿಗಾರರು ಮತ್ತು 110 ಲಕ್ಷ ಕುರಿಗಳ ವಿಮೆ ರಕ್ಷಣೆ ಒದಗಿಸಲು ರೂ 500 00 ಲಕ್ಷ ಸಹಾಯಧನವನ್ನು ಕುರಿಗಳ ಮತ್ತು ಕುರಿಗಾತರ ಕುಟುಂಬ ಆಕಸ್ಮಿಕ ನಷ್ಟಗಳ ಪರಿಹಾರ ಕಾರ್ಯಕ್ರಮಕ್ಕಾಗಿ ರೂ 500 00 ಲಕ್ಷಗಳನ್ನು ನಿಗಧಿಪಡಿಸಿದೆ ರೂ 470 00 ಲಕ್ಷಗಳಿಗೆ ಮಂಜೂರಾತಿ ನೀಡಲಾಗಿದೆ
- **ಹೆಬ್ಬಾಳದಲ್ಲಿರುವ ಪಶು ಆರೋಗ್ಯ ಮತ್ತು ಜೈವಿಕ ಸಂಸ್ಥೆಗೆ** ಜಾನುವಾರು ಲಸಿಕ ಉತ್ಪಾದನೆ ಮತ್ತು ಸರಬರಾಜಿಗಾಗಿ ರೂ 265 00 ಲಕ್ಷಗಳನ್ನು ಒದಗಿಸಿದೆ ಇದುವರೆವಿಗೂ ರೂ 150 00 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ
- **ಜಾನುವಾರು ರೋಗಗಳ ನಿಯಂತ್ರಣ (ಕೇಂದ್ರ ಪುರಸ್ಕೃತ ಯೋಜನೆ– ಕೇಂದ್ರ 75 ರಾಜ್ಯ 251)** ಕಾರ್ಯಕ್ರಮದಡಿ ರೂ 1440 68 ಲಕ್ಷಗಳನ್ನು ಒದಗಿಸಿದೆ ರೂ 461 05 ಲಕ್ಷ ಅನುದಾನ ಬಿಡುಗಡೆ ಮಾಡಿದ್ದು 89 00 ಲಕ್ಷ ಜಾನುವಾರುಗಳಿಗೆ ಕಾಲು ಬಾಯಿ ಜ್ವರ, ಪಿ ಪಿ ಆರ್ ಹಾಗೂ ಗಳಲೆ ರೋಗಗಳ ವಿರುದ್ಧ ಹಾಗೂ 50 62 ಲಕ್ಷ ಕೋಳಿಗಳಿಗೆ ಕೊಕ್ಕರೆ ರೋಗದ ವಿರುದ್ಧ ಚುಚ್ಚುಮದ್ದು ಹಾಕಲಾಗಿದೆ ಹಾಗೂ 15080 ಜಾನುವಾರುಗಳಿಗೆ ಕ್ಷಯ ಹಾಗೂ ಕಂದುರೋಗದ ತಪಾಸಣೆ ಮಾಡಲಾಗಿದೆ
- **ದಕ್ಷಿಣ ಪ್ರಾಂತೀಯ ಪ್ರಯೋಗಾಲಯ, ಬೆಂಗಳೂರು ಸಂಸ್ಥೆಯಲ್ಲಿ ಜಾನುವಾರು ರೋಗಗಳ ತಪಾಸಣೆ, ರೋಗ ನಿರ್ಣಯ, ಸೌಲಭ್ಯಗಳಿಗಾಗಿ ಸಹಾಯಧನವಾಗಿ** ರೂ 190 00 ಲಕ್ಷ ಅನುದಾನ ನಿಗದಿಪಡಿಸಿದ್ದು ಇದುವರೆಗೆ ರೂ 100 00 ಲಕ್ಷಗಳಿಗೆ ಮಂಜೂರು ನೀಡಿರುತ್ತದೆ **ಪ್ರಾಣರೋಗ ಪತ್ತೆಮಾಡುವ ಪ್ರಯೋಗಾಲಗಳನ್ನು** 30 ತಾಲ್ಲೂಕುಗಳಲ್ಲಿ ಸ್ಥಾಪಿಸಲು ರೂ 10 00 ಲಕ್ಷಗಳಿಗೆ ಮಂಜೂರಾತಿ ನೀಡಲಾಗಿದೆ ಡಿಸೆಂಬರ್ ಅಂತ್ಯದವರೆಗೆ ರೂ 5 08 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ
- **ಇಲಾಖಾ ಕ್ಷೇತ್ರದಲ್ಲಿನ ಕಟ್ಟಡಗಳ ಅಭಿವೃದ್ಧಿಗಾಗಿ** ರೂ 50 00 ಲಕ್ಷ ಒದಗಿಸಿದ್ದು ಇದರಲ್ಲಿ ರೂ 26 72 ಲಕ್ಷ ಈಗಾಗಲೇ ವೆಚ್ಚವಾಗಿದ್ದು, ಉಳಿದ ಕಾಮಗಾರಿಗಳು ವಿವಿಧ ಹಂತದ ಪ್ರಗತಿಯಲ್ಲಿರುತ್ತದೆ

- **ಪಶು ಸಂಗೋಪನಾ ವಿಸ್ತರಣಾ ಕಾರ್ಯಚಟುವಟಿಕೆ ಅಂಗವಾಗಿ** ರೂ 37 34 ಲಕ್ಷಗಳ ಅನುದಾನವನ್ನು ನಿಗದಿಪಡಿಸಲಾಗಿದ್ದು, ಇದುವರೆಗೂ ರೂ 22 09 ಲಕ್ಷ ವೆಚ್ಚವಾಗಿರುತ್ತದೆ 3966 ರೈತರಿಗೆ ತರಬೇತಿ ನೀಡಲಾಗಿದೆ
- **ಕೇಂದ್ರ ಪುರಸ್ಕೃತ ಯೋಜನೆ, ದೊಡ್ಡರೋಗ ನಿವಾರಣೆ ಯೋಜನೆ ಮತ್ತು ಕಣ್ಗಾವಲು ಕಾರ್ಯಕ್ರಮದಡಿ (ಶೇ 100%)** ರೂ 58 18 ಲಕ್ಷ ಅನುದಾನವನ್ನು ನಿಗದಿಯಾಗಿದ್ದು ಇದುವರೆವಿಗೂ ರೂ 30 2 ಲಕ್ಷಗಳ ಕಾರ್ಯಕ್ರಮಕ್ಕೆ ಮಂಜೂರಾತಿ ನೀಡಿದ್ದು, ಪ್ರಗತಿ ವಿವಿಧ ಹಂತದಲ್ಲಿರುತ್ತದೆ ದೊಡ್ಡರೋಗ ಪತ್ತೆ ಹಚ್ಚುವ ಸಲುವಾಗಿ 40950 ಗ್ರಾಮ ತಪಾಸಣೆ ಮಾಡಲಾಗಿದೆ
- **ಮಾದರಿ ಸಮೀಕ್ಷೆ ಯೋಜನೆಯಡಿ** ರೂ 53 57 ಲಕ್ಷ ವೆಚ್ಚದಲ್ಲಿ 4266 ಗ್ರಾಮಗಳ ಸಂಪೂರ್ಣ ಎಣಿಕೆ ಮಾಡಲಾಗಿದೆ
- **ಶುದ್ಧ ಹಾಗೂ ಗುಣಮಟ್ಟದ ಹಾಲು ಉತ್ಪಾದನೆ ಮಾಡಲು** ರೂ 40 00 ಕೋಟಿ ನಿಗದಿಪಡಿಸಿದೆ ಈಗಾಗಲೇ ರೂ 200 00 ಲಕ್ಷಗಳ ವೆಚ್ಚವಾಗಿದ್ದು ಬಿಡುಗಡೆಗೆ ಶೇ 100 ಸಾಧನೆಯಾಗಿರುತ್ತದೆ
- **ಪಶು ಸಂಗೋಪನೆ ಮೇಲಿನ ಬಂಡವಾಳ ವೆಚ್ಚ ಕಾರ್ಯಕ್ರಮದಡಿ** ರೂ 110 00 ಲಕ್ಷಗಳನ್ನು ನಿಗದಿಪಡಿಸಿದೆ ಆರ್ ಐ ಡಿ ಎಫ್ 12ರ ಕಾರ್ಯಕ್ರಮದಡಿ 150 ಹೊಸ ಪಶುವೈದ್ಯ ಸಂಸ್ಥೆಗಳ ಕಟ್ಟಡ ನಿರ್ಮಾಣಕ್ಕಾಗಿ ರೂ 15 00 ಕೋಟಿಗಳಿಗೆ ಅನುಮತಿ ನೀಡಲಾಗಿದೆ

ವಿಶೇಷ ಘಟಕ ಯೋಜನೆ

2006–07ನೇ ಸಾಲಿನಲ್ಲಿ ರಾಜ್ಯ ವಲಯ ಯೋಜನೆಯಡಿಯಲ್ಲಿ ನಿಗಧಿವಡಿಸಿರುವ ರೂ 311 22 ಲಕ್ಷ ಹಿಂದಕ್ಕೆ ಪಡೆಯಲಾಗಿದೆ ಜಿಲ್ಲಾ ಯೋಜನೆಯಡಿ ರೂ 217 66 ಲಕ್ಷ ನಿಗದಿಪಡಿಸಲಾಗಿದ್ದು ಪರಿಶಿಷ್ಟ ಜಾತಿಯವರಿಗೆ ಜಿಲ್ಲಾ ವಲಯ ನೆರವಿನಡಿ ಒಟ್ಟು ಸೇರಿ 2043 ಗುರಿ ಹೊಂದಲಾಗಿದ್ದು, ಗುರಿಯ ಸದರಿ ಅವಧಿಯಲ್ಲಿ ರೂ 62 97 ಲಕ್ಷ ವೆಚ್ಚದಲ್ಲಿ 607 ಕುಟುಂಬಗಳಿಗೆ ಸಹಾಯಧನ ಡಿಸೆಂಬರ್ 2006ರ ವರೆಗೆ ಒದಗಿಸಲಾಗಿದೆ

ಗಿರಿಜನ ಉಪಯೋಜನೆ

2006–07ನೇ ಸಾಲಿನಲ್ಲಿ ರಾಜ್ಯವಲಯ ಯೋಜನೆಯಡಿಯಲ್ಲಿ ನಿಗದಿವಡಿಸಿರುವ ರೂ 118 99 ಲಕ್ಷ ಹಿಂದಕ್ಕೆ ಪಡೆಯಲಾಗಿದೆ ಜಿಲ್ಲಾ ಯೋಜನೆಯಡಿ ರೂ 98 32 ಲಕ್ಷ ನಿಗದಿಪಡಿಸಲಾಗಿದ್ದು, ಪರಿಶಿಷ್ಟ ಪಂಗಡದವರಿಗೆ ಜಿಲ್ಲಾವಲಯ ನೆರವಿನಡಿ ಒಟ್ಟು ಸೇರಿ 532 ಗುರಿ ಹೊಂದಲಾಗಿದ್ದು, ಗುರಿಯ ನದರಿ ಅವಧಿಯಲ್ಲಿ ರೂ 17 95 ಲಕ್ಷ ವೆಚ್ಚದಲ್ಲಿ 210 ಕುಟುಂಬಗಳಿಗೆ ಸಹಾಯಧನ ಡಿಸೆಂಬರ್ 2006ರ ವರೆಗೆ ಒದಗಿಸಲಾಗಿದೆ

ಪ್ರಶ್ನೆ ಸಂಖ್ಯೆ 180 ಶ್ರೀ ಬಾಲರಾಜ್ ಎಸ್ (ಕೊಳ್ಳೇಗಾಲ)

ಜಿಲ್ಲಾ ವಲಯ ಕಾರ್ಯಕ್ರಮಗಳು

ಅ) ಜಿಲ್ಲಾ ಪಂಚಾಯತ್ ಕಾರ್ಯಕ್ರಮಗಳು

1) ಜಾನುವಾರು ಆಸ್ಪತ್ರೆಯಲ್ಲಿ ಪಾಲಿಕ್ಲಿನಿಕ್ ಸ್ಥಾಪನೆ

ಪಾಲಿಕ್ಲಿನಿಕ್ ಸ್ಥಾಪನೆಗೆ ಬೇಕಾದ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಪ್ರಸಕ್ತ ಸಾಲಿನಲ್ಲಿ ರೂ 21 63 ಲಕ್ಷಗಳ ಅನುದಾನವನ್ನು ನಿಗದಿಪಡಿಸಲಾಗಿದೆ

2) ಕಟ್ಟಡಗಳು

ಜಿಲ್ಲಾವಲಯಕ್ಕೆ ಸೇರಿದ ವಿವಿಧ ಪಶು ಸಂಸ್ಥೆಗಳ ಕಟ್ಟಡಗಳ ನಿರ್ಮಾಣ ಹಾಗೂ ನಿರ್ವಹಣೆಗಾಗಿ ಪ್ರಸಕ್ತ ಸಾಲಿನಲ್ಲಿ ರೂ 135 80 ಲಕ್ಷಗಳನ್ನು ನಿಗದಿಪಡಿಸಿದೆ

3) ಔಷಧಿ ಮತ್ತು ರಾಸಾಯನಿಕ ಸರಬರಾಜು

2006–07ನೇ ಸಾಲಿನಲ್ಲಿ ಘನೀಕೃತ ವೀರ್ಯ ನಳಿಕೆಗಳನ್ನು ಸಂರಕ್ಷಿಸಲು ಬೇಕಾದ ದ್ರವ ಸಾರಜನಕ ಔಷಧ, ಲಸಿಕೆಗಳು ಹಾಗೂ ರಾಸಾಯನಿಕ ಖರೀದಿಗಾಗಿ ರೂ 512 09 ಲಕ್ಷಗಳ ಅನುದಾನವನ್ನು ನಿಗದಿಪಡಿಸಿದೆ

4) ಜಾನುವಾರು ತಳಿ ಸಂವರ್ಧನಾ ಕೇಂದ್ರ.

ಜಾನುವಾರು ತಳಿ ಸಂವರ್ಧನಾ ಕೇಂದ್ರ, ಬು , ಚಾಮರಾಜನಗರ ಜಿಲ್ಲೆ ಇಲ್ಲಿಯ ಸಿಬ್ಬಂದಿಯ ವೇತನಕ್ಕಾಗಿ ಹಾಗೂ ಇತರೆ ವೆಚ್ಚಕ್ಕಾಗಿ ರೂ 6 41 ಲಕ್ಷಗಳನ್ನು ಪ್ರಸಕ್ತ ಸಾಲಿನಲ್ಲಿ ನಿಗದಿಪಡಿಸಿದೆ

5) ಗಿರಿರಾಜ ಹಕ್ಕಿಗಳ ಸಾಕಾಣಿಕೆ

ಗ್ರಾಮೀಣ ಜನತೆಯ ಹಿತ್ತಲಲ್ಲಿ ಕೋಳಿ ಸಾಕಾಣಿಕೆ ಮಾಡಲು ಆರ್ಥಿಕ ಅಭಿವೃದ್ಧಿ ಹೊಂದಲು ಸಹಾಯವಾಗುವಂತೆ ಹೆಚ್ಚು ಹೆಚ್ಚು ಗಿರಿರಾಜ ಕೋಳಿ ಸಾಕಾಣಿಕೆ ಮಾಡಿ ಸರಬರಾಜು ಮಾಡಲು ಪ್ರಸಕ್ತ ಸಾಲಿನಲ್ಲಿ ರೂ 32 60 ಲಕ್ಷಗಳನ್ನು ನಿಗದಿಪಡಿಸಿದೆ

6) ವಿಸ್ತರಣಾ ಘಟಕಗಳ ಬಲಪಡಿಸುವಿಕೆ

ಜಾನುವಾರು ಆರೋಗ್ಯ ಮತ್ತು ಜಾನುವಾರುಗಳ ಅಭಿವೃದ್ಧಿಗೆ ಸಂಬಂಧಿಸಿದ ವಿಸ್ತರಣಾ ಚಟುವಟಿಕೆಗಾಗಿ ಪ್ರಸಕ್ತ ಸಾಲಿನಲ್ಲಿ ರೂ 27 07 ಲಕ್ಷಗಳನ್ನು ನಿಗದಿಪಡಿಸಿದೆ

7) ಮೊಲ ಸಾಕಾಣಿಕ ಕ್ಷೇತ್ರಗಳು

ಕೋಲಾರ ಮತ್ತು ಕೊಡಗು ಜಿಲ್ಲೆಗಳಲ್ಲಿ ಈ ಕಾರ್ಯಕ್ರಮವನ್ನು ರೂ 1 00 ಲಕ್ಷ ವೆಚ್ಚದಲ್ಲಿ ಅನುಷ್ಠಾನಗೊಳಿಸಲಾಗುತ್ತಿದ್ದು, ಮೊಲಗಳನ್ನು ಉತ್ಪಾದಿಸಿ ರೈತರಿಗೆ ವಿತರಣೆ ಮಾಡುವ ಗುರಿಯನ್ನು ಹೊಂದಲಾಗಿದೆ

- ಅತಿ ಹಿಂದುಳಿದ ತಾಲ್ಲೂಕುಗಳಲ್ಲಿ 69 ಹೊಸ ಪಶು ಚಿಕಿತ್ಸಾಲಯಗಳನ್ನು ಸ್ಥಾಪಿಸಲು ಯೋಜನಾ ಇಲಾಖೆಯ ಸಹಮತಿ ನೀಡಲಾಗಿದ್ದು ಮಂಜೂರಾತಿ ಹಂತದಲ್ಲಿರುತ್ತದೆ

- ಸುವರ್ಣ ಕರ್ನಾಟಕ ಗೋತಳಿ ಸಂರಕ್ಷಣೆ ಕಾರ್ಯಕ್ರಮಕ್ಕಾಗಿ ರೂ 270 00 ಲಕ್ಷಗಳಿಗೆ ಮಂಜೂರಾತಿ ದೊರಕಿದ್ದು ಪ್ರತಿ ಜಿಲ್ಲೆಗೆ ರೂ 10 00 ಲಕ್ಷ ಅನುದಾನ ನೀಡಲು ಕ್ರಮ ಕೈಗೊಳ್ಳಲಾಗಿದೆ
- ಗೋಮೂತ್ರದಲ್ಲಿನ ಔಷಧ ಗುಣಗಳನ್ನು ಹೆಚ್ಚಿನ ಸಂಶೋಧನೆಗಾಗಿ ಪಶುವೈದ್ಯಕೀಯ ವಿಶ್ವವಿದ್ಯಾಲಯ ಬೀದರ್‌ಗೆ ರೂ 23 00 ಲಕ್ಷಗಳಿಗೆ ಮಂಜೂರಾತಿ ನೀಡಲಾಗಿದೆ
- ಶಿವಮೊಗ್ಗದಲ್ಲಿ ಪಶುವೈದ್ಯಕೀಯ ಕಾಲೇಜು ಸ್ಥಾಪನೆಗೆ ರೂ 844 00 ಲಕ್ಷ ಅನುದಾನ ಒದಗಿಸಿ ಮಂಜೂರಾತಿ ನೀಡಲಾಗಿದೆ
  ಕೇಂದ್ರ ನೆರವಿನ ಕಾರ್ಯಕ್ರಮದಡಿ ಗ್ರಾಮೀಣ ನಿರ್ವಹಣೆ ಮತ್ತು ಆಡಳಿತ ಸಂಸ್ಥೆಯನ್ನು ಗುಜರಾತ್ ರಾಜ್ಯ ಆನಂದ ಮಾದರಿಯಲ್ಲಿ ರಾಜ್ಯದಲ್ಲಿಯೂ ಸಹ ತೆರೆಯಲು ರೂ 5 00 ಕೋಟಿ ಅನುದಾನ ಒದಗಿಸಿದ್ದು ಕೇಂದ್ರ ಸರ್ಕಾರದ ಅನುಮತಿಯೊಂದಿಗೆ ಸ್ಥಾಪಿಸಲು ಕ್ರಮವಹಿಸಿದೆ
- **ಕರ್ನಾಟಕ ಪಶುವೈದ್ಯಕೀಯ ಸಂಘಕ್ಕೆ ಪ್ರತಿ ವೃತ್ತಿ ನೈಪುಣ್ಯತೆಗಾಗಿ** ರೂ 5 00 ಲಕ್ಷ ಅನುದಾನಕ್ಕೆ ಮಂಜೂರಾತಿ ನೀಡಲಾಗಿದೆ
- **ಕರ್ನಾಟಕ ಸಹಕಾರ ಕುಕ್ಕುಟ ಮಹಾ ಮಂಡಳಿಗೆ** ಸಹಾಯಧನವಾಗಿ ರೂ 15 00 ಲಕ್ಷ ನಿಗಧಿಪಡಿಸಿದ್ದು, ರೂ 10 00 ಲಕ್ಷಕ್ಕೆ ಮಂಜೂರಾತಿ ನೀಡಿದೆ 5000 ಗಿರಿರಾಜ ಕೋಳಿಮರಿ ಸರಬರಾಜು ಗುರಿಯಿದ್ದು, 5570 ಕೋಳಿಮರಿ ಸರಬರಾಜು ಮಾಡಲಾಗಿದೆ ಹಾಗೂ 388 ಜನ ರೈತರಿಗೆ ಕೋಳಿ ಸಾಕಾಣಿಗಾಗಿ ತರಬೇತಿ ನೀಡಲಾಗಿದೆ

8 ಜಾನುವಾರು ರೋಗಗಳ ನಿಯಂತ್ರಣ (ಕೇಂದ್ರ–75 ರಾಜ್ಯ–25)

ಈ ಕಾರ್ಯಕ್ರಮದಲ್ಲಿ ಪ್ರಸಕ್ತ ಸಾಲಿನಲ್ಲಿ ರೂ 470 68 ಲಕ್ಷ ವೆಚ್ಚದಲ್ಲಿ ಜಾನುವಾರುಗಳಿಗೆ ಕಾಲು, ಬಾಯಿ ಜ್ವರ, ಗಂಟಲು ಬೇನೆ ಹಾಗೂ ಪಿ ಪಿ ಆರ್ ರೋಗಗಳ ವಿರುದ್ಧ ಲಸಿಕೆ ಹಾಕುವ ಗುರಿ ಹೊಂದಲಾಗಿದೆ

ಆ) ತಾಲ್ಲೂಕು ಪಂಚಾಯತ್ ಕಾರ್ಯಕ್ರಮಗಳು

ಗ್ರಾಮೀಣ ಪಶುವೈದ್ಯ ಶಾಲೆಗಳನನು ತೆರೆಯುವುದು ಹಾಗೂ ಅವುಗಳನ್ನು ಮೇಲ್ದರ್ಜೆಗೇರಿಸುವುದು

ಹಾಲಿ ಇರುವ ಪಶು ಸಂಸ್ಥೆಗಳ ಸಿಬ್ಬಂದಿ ವೇತನ, ಹಾಗೂ ಇತರೆ ಖರ್ಚಿಗಾಗಿ ಹಾಗೂ ಹೊಸದಾಗಿ ಪ್ರಾರಂಭಿಸುವ ಪಶು ಸಂಸ್ಥೆಗಳ ಖರ್ಚಿಗಾಗಿ ಹಾಗೂ ಪಶು ಸಂಸ್ಥೆಗಳನ್ನು ಮೇಲ್ದರ್ಜೆಗೇರಿಸುವುದಕ್ಕಾಗಿ ಪ್ರಸಕ್ತ ಸಾಲಿನಲ್ಲಿ ರೂ 1745 52 ಲಕ್ಷ ಅನುದಾನ ನಿಗದಿಪಡಿಸಲಾಗಿದೆ

10 ಗೊಡ್ಡು / ಬಂಜೆ ಜಾನುವಾರುಗಳಿಗೆ ಶಿಬಿರದ ವ್ಯವಸ್ಥೆ

ಪ್ರಸಕ್ತ ಸಾಲಿನಲ್ಲಿ ರೂ 51 61 ಲಕ್ಷಗಳ ಅನುದಾನದೊಂದಿಗೆ ಗೊಡ್ಡು ಜಾನುವಾರು ಶಿಬಿರಗಳನ್ನು ಏರ್ಪಡಿಸುವುದು ಹಾಗೂ ರೈತರಲ್ಲಿ ಜಾನುವಾರುಗಳಲ್ಲಿನ ಬಂಜೆನತದ ಬಗ್ಗೆ ಅರಿವು ಮೂಡಿಸುವುದು ಇತ್ಯಾದಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ

11 ಟಗರು ಮತ್ತು ಹಂದಿ ಸರಬರಾಜು

ಕುರಿ ಮತ್ತು ಹಂದಿ ಅಭಿವೃದ್ಧಿಗಾಗಿ ರೂ 4 97 ಲಕ್ಷ ವೆಚ್ಚದಲ್ಲಿ ಆಯ್ದ ಐದು ಜಿಲ್ಲೆಗಳಲ್ಲಿ ಉತ್ತಮ ಗುಣಮಟ್ಟದ ಟಗರು ಮತ್ತು ಹಂದಿಗಳನ್ನು ದುರ್ಬಲ ವರ್ಗದ ಜನರಿಗೆ ಸರಬರಾಜು ಮಾಡಲು ಉದ್ದೇಶಿಸಲಾಗಿದೆ

65 (181) ಶ್ರೀ ಬಾಲರಾಜ್ ಎಸ್ (ಕೊಳ್ಳೇಗಾಲ) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕೊಳ್ಳೇಗಾಲ ಕ್ಷೇತ್ರದ ಯಳಂದೂರು ಮತ್ತು ಕೊಳ್ಳೇಗಾಲ ತಾಲ್ಲೂಕುಗಳಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಪ್ರಾರಂಭಿಸಲು ಕೋರಿಕೆ ಬಂದಿದೆಯೇ ,

ಆ) ಹಾಗಿದ್ದಲ್ಲಿ, ಯಾವಾಗ ಮಂಜೂರು ಮಾಡಲಾಗುವುದು ,

ಇ) ಮಂಜೂರು ಮಾಡದಿದ್ದಲ್ಲಿ, ಅದಕ್ಕೆ ಕಾರಣಗಳೇನು ,

ಈ) ಕೊಳ್ಳೇಗಾಲ ಸಾರ್ವಜನಿಕ ಆಸ್ಪತ್ರೆಯಲ್ಲಿ ರಕ್ತ ನಿಧಿಯನ್ನು ಸ್ಥಾಪನೆ ಮಾಡಲು ಸರ್ಕಾರ ಉದ್ದೇಶಿಸಿದೆಯೇ ,

ಉ) ಉದ್ದೇಶಿಸಿದ್ದಲ್ಲಿ, ಈ ಸಾಲಿನಲ್ಲಿ ಪ್ರಾರಂಭಿಸಲಾಗುವುದು ?

ಶ್ರೀ ಆರ್ ಅಶೋಕ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಬಂದಿದೆ

ಆ) ಅಗತ್ಯಕ್ಕಿಂತ ಹೆಚ್ಚಿನ ಆಸ್ಪತ್ರೆಗಳು ಇರುವುದರಿಂದ ಹೊಸದಾಗಿ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮಂಜೂರು ಮಾಡಲು ಅವಕಾಶವಿರುವುದಿಲ್ಲ

ಇ) ಯಳಂದೂರು ಮತ್ತು ಕೊಳ್ಳೇಗಾಲ ತಾಲ್ಲೂಕುಗಳಲ್ಲಿ ಈಗಾಗಲೇ ಕೇಂದ್ರ ಸರ್ಕಾರದ ಮಾರ್ಗಸೂಚಿಯಂತೆ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ ಆದ್ದರಿಂದ ಹೆಚ್ಚಿನ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಪ್ರಾರಂಭಿಸುವ ಅವಕಾಶವಿರುವುದಿಲ್ಲ

ಇ) ರಕ್ತ ಸಂಗ್ರಹಾಲಯವನ್ನು ಸ್ಥಾಪಿಸಲು ಕ್ರಮ ಕೈಗೊಳ್ಳಲಾಗುತ್ತಿದೆ

ಈ) ಮಂಜೂರಾತಿ ನಂತರ ಪ್ರಾರಂಭಿಸಲಾಗುವುದು

66 (182) ಶ್ರೀ ಬಾಲರಾಜ್ ಎಸ್ (ಕೊಳ್ಳೇಗಾಲ) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕೊಳ್ಳೇಗಾಲ ತಾಲ್ಲೂಕು ತುಂಬಾ ದೊಡ್ಡ ತಾಲ್ಲೂಕು ಆಗಿದ್ದು, ಜನಸಂಖ್ಯೆಗೆ ಅನುಗುಣವಾಗಿ ಆಸ್ಪತ್ರೆ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ,